ಕರ್ನಾಟಕ ಸರ್ಕಾರ

**ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12**

ಸಂಖ್ಯೆ : ಪಪೂಶಿಇ/ಶೈ.ಶಾ/ಹೇಶುಮಪಾ/2020-21 ದಿನಾಂಕ 19.12.2020

## ಸುತ್ತೋಲೆ

ವಿಷಯ: 2020-21ನೇ ಶೈಕ್ಷಣಿಕ ಸಾಲಿನಲ್ಲಿ ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರ ಶುಲ್ಕ ವಿನಾಯಿತಿ ಸಂಬಂಧ ವಿದ್ಯಾರ್ಥಿನಿಯರ ದಾಖಲಾತಿ ಸಂಖ್ಯೆ ವಿವರ ನೀಡುವ ಕುರಿತು.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ: ಇಪಿ 82 ಯೋಯೋಕ 2020 ಬೆಂಗಳೂರು ದಿನಾಂಕ:10.08.2020

------

ಮೇಲ್ಕಂಡ ವಿಷಯ ಹಾಗೂ ಉಲ್ಲೇಖದ ಪತ್ರದನ್ವಯ, 2020-21 ನೇ ಸಾಲಿನ ಹೆಣ್ಣು ಮಕ್ಕಳ ಶುಲ್ಕ ಮರುಪಾವತಿಗೆ ಸಂಬಂಧಿಸಿದಂತೆ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ದಿ:19.12.2020 ರವರೆಗೆ ದಾಖಲಾಗಿರುವ ವಿದ್ಯಾರ್ಥಿನಿಯರ ವಿವರವನ್ನು ಈ ಕೆಳಕಂಡ ನಮೂನೆಯಲ್ಲಿರುವ ಕ್ರಮದಂತೆ ಭರ್ತಿ ಮಾಡಿ ನೀಡಲು ತಿಳಿಸಿದೆ

ಜಿಲ್ಲೆಯ ಹೆಸರು:-

| ಕ್ರ ಸ | ಕಾ.ಸಂಕೇತ ಸಂಖ್ಯೆ | ಸ.ಪ.ಪೂ.ಕಾಲೇಜಿನ ಹೆಸರು | ಪ್ರಥಮ ಪಿಯುಸಿ | ದ್ವಿತೀಯ ಪಿಯುಸಿ | ಒಟ್ಟು |
|---|---|---|---|---|---|
| | | | | | |
| | | | | | |

ಸದರಿ ಮಾಹಿತಿಯನ್ನು ಜಿಲ್ಲಾ ಉಪ ನಿರ್ದೇಶಕರು ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಂದ ಪಡೆದು, ಕ್ರೋಢೀಕೃತ ಮಾಹಿತಿಯ ಸಾಫ್ಟ್ ಪ್ರತಿಯನ್ನು ಇ-ಮೇಲ್ ಐಡಿ academicgirlsreimburse@gmail.com ಗೆ ದಿನಾಂಕ 21.12.2020 ರೊಳಗೆ ನೀಡಲು ಸೂಚಿಸಿದೆ. ಮಾಹಿತಿಯನ್ನು ನಿಗದಿತ ಸಮಯದಲ್ಲಿ ನೀಡದೆ ಇದ್ದಲ್ಲಿ ಶುಲ್ಕ ಮರುಪಾವತಿಗೆ ಸಂಬಂಧಿಸಿದಂತೆ ಮುಂದಿನ ಆಗುಹೋಗುಗಳಿಗೆ ಪ್ರಾಂಶುಪಾಲರನ್ನು ಮತ್ತು ಜಿಲ್ಲಾ ಉಪ ನಿರ್ದೇಶಕರನ್ನು ನೇರವಾಗಿ ಹೊಣೆಗಾರರನ್ನಾಗಿ ಮಾಡಲಾಗುವುದು. ಈ ಕಾರ್ಯವನ್ನು ಪ್ರಥಮ ಆದ್ಯತೆ ಎಂದು ಪರಿಗಣಿಸಿ ಅತೀ ತುರ್ತಾಗಿ ನಿರ್ವಹಿಸಲು ಸೂಚಿಸಿದೆ. ಪ್ರತ್ಯೇಕವಾಗಿ ಕಾಲೇಜಿನಿಂದ ಮಾಹಿತಿ ನೀಡಿದ್ದಲ್ಲಿ ಮಾಹಿತಿಯನ್ನು ಪರಿಗಣಿಸಲಾಗುವುದಿಲ್ಲ

ನಿರ್ದೇಶಕರು

ಪದವಿ ಪೂರ್ವ ಶಿಕ್ಷಣ ಇಲಾಖೆ

ಗೆ,

ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳಿಗೆ- ಅಗತ್ಯ ಕ್ರಮಕ್ಕಾಗಿ

ಪ್ರತಿಯನ್ನು -1. ಇ-ಆಡಳಿತ ಶಾಖೆಗೆ-ಅಂತರ್ಜಾಲದಲ್ಲಿ ಅಳವಡಿಸಲು

2. ಕಛೇರಿ ಪ್ರತಿ